# ಸಂಸ್ಥೆಯ ಕಿರು ಪರಿಚಯ



ಉಡುಪಿ ನಗರ ಹಾಗೂ ಪರಿಸರದ ಬಡ ಮುಸ್ಲಿಮರ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡು ಕೆಲವೇ ಮಂದಿ ಸಮಾನ ಮನಸ್ಕ ಸಂಗಾತಿಗಳ ಚಿಂತನೆಯಂತೆ 25 ವರ್ಷಗಳ ಹಿಂದೆ ಸ್ಥಾಪನೆಗೊಂಡ ಮುಸ್ಲಿಮ್ ವೆಲ್ಫೇರ್ ಎಸೋಸಿಯೇಶನ್ (ರಿ) ಉಡುಪಿ, ಹಲವು ಮಂದಿ ಹಿರಿಯ ಸದಸ್ಯರ ಅರ್ಪಣಾ ಮನೋಭಾವದ ಸೇವೆಯನ್ನು ಪಡೆದು ಮುನ್ನಡೆಯುತ್ತ ಇದೀಗ ಸುಮಾರು 600ರಷ್ಟು ಅಜೀವ ಸದಸ್ಯರನ್ನು ಹೊಂದಿದೆ.
ಸಂಸ್ಥೆಯ ಹುಟ್ಟಿಗೆ ಕಾರಣಕರ್ತರಾದವರ ಪೈಕಿ ಹಲವು ಹಿರಿಯ ವ್ಯಕ್ತಿತ್ವಗಳು ನಮ್ಮ ಮುಂದೆ ಭೌತಿಕವಾಗಿ ಕಣ್ಮರೆಯಾಗಿವೆ. ಆದರೆ ಅವರ ಮಾದರಿ ಸೇವೆ ಮತ್ತು ಮಾರ್ಗದರ್ಶನ ಇಂದಿಗೂ ನಮಗೆ ಆದರ್ಶಪ್ರಾಯವಾಗಿ ನೆಲೆನಂತಿದೆ. ಇಸ್ಲಾಮ್ ಮತ್ತು ಬಡ ಮುಸ್ಲಿಮರ ಸೇವೆಯ ಪಥದಲ್ಲಿ ಅಲ್ಲಾಹನ ಅಪಾರ ಅನುಗ್ರಹ, ಸದಸ್ಯರ ನಿರಂತರ ಬೆಂಬಲ ಮತ್ತು ಸಮುದಾಯ ಬಾಂಧವರ ಸಹಕಾರ ಇವುಗಳಿಂದಾಗಿ ಹತ್ತು ಹಲವು ಮಜಲುಗಳನ್ನು ದಾಟಿ ಒಂದು ಸುಧೃಡ ಸಧವಾ ಸಂಸ್ಥೆಯಾಗಿ ಬೆಳೆದಿದೆ. ತನ್ನ ವೈವಿಧ್ಯಮಯ ಚಟುವಟಿಕೆಗಳಿಂದಾಗಿ ಉಡಪಿ ಹಾಗೂ ಸುತ್ತ ಮುತ್ತಲ ಪ್ರದೇಶಗಳಲ್ಲಿ ಜನಮನ್ನಣೆಗಳಿಸಿ ಈ ವರ್ಷ ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ.

ಸಂಸ್ಥೆಯು ಸ್ಥಾಪನೆಗೊಂಡ ವರ್ಷದಿಂದ ಇದುವರೆಗೂ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಯೋಜನೆಗಳು:

- ಉಡುಪಿ ತಾಲೂಕಿನ ಆರ್ಥಿಕವಾಗಿ ಹಿಂದುಳಿದ ಹಲವು ಮದ್ರಸಾಗಳಿಗೆ ಮಾಸಿಕ ಆರ್ಥಿಕ ಸಹಾಯ ನೀಡುವ ಮೂಲಕ ಧಾರ್ಮಿಕ ವಿದ್ಯಾಭ್ಯಾಸದ ಬಗ್ಗೆ ಸಂಸ್ಥೆಗೆ ಇರುವ ಕಾಳಜಿಯನ್ನು ತೋರಿಸುತ್ತದೆ.
- ಪ್ರತಿ ವರ್ಷ ಈದುಲ್ ಫಿತ್ರ್ ಸಂದರ್ಭದಲ್ಲಿ ಸಮಾಜ ಬಾಂಧವರಿಂದ ಮೊತ್ತವನ್ನು ಸಾಮೂಹಿಕವಾಗಿ ಸಂಗ್ರಹಿಸಿ ಅದನ್ನು ಅರ್ಹ ಬಡಕುಟುಂಬಗಳಿಗೆ ಹಬ್ಬದ ಮುನ್ನಾದಿನ ಅವರ ಮನೆ ಬಾಗಿಲಿಗೆ ತೆರಳಿ ವಿತರಿಸಲಾಗುತ್ತದೆ. ಕಳೆದ ವರ್ಷ ಸಂಗ್ರಹಿಸಲಾದ ಫಿತ್ರ್ ಮೊತ್ತವು ಒಂದುವರೆ ಲಕ್ಷ ರುಪಾಯಿಗಳಿಗೂ ಮಿಕ್ಕಿ ದಾಖಲೆಯಾಗಿತ್ತು. ಸಂಸ್ಥೆಯ ಸದಸ್ಯರು ಬೇರೆ ಬೇರೆ ತಂಡಗಳಲ್ಲಿ ಉಡುಪಿ ತಾಲೂಕಿನ ಕಾಪು, ಬೆಳಪು, ಪಕೀರ್ನಕಟ್ಟೆ, ಮೂಳೂರು, ಉಚ್ಚಿಲ, ಭಾಸ್ಕರ ನಗರ, ಪಂದುಬೆಟ್ಟು, ಮೂಡಬೆಟ್ಟು, ಆದಿಉಡುಪಿ, ಅಂಬಾಗಿಲು, ದೊಡ್ಡಣಗುಡ್ಡೆ, ಉದ್ಯಾವರ, ಸಂಪಿಗೆ ನಗರ, ನಾಯರ್‌ಕೆರೆ, ಅಂಬಲ್ಪಾಡಿ, ಮಂಚಿ, ರಾಜೀವನಗರ, ಮೊದಲಾದ ಪ್ರದೇಶಗಳಿಗೆ ತೆರಳಿ ವಿತರಣೆಯನ್ನು ಯಶಸ್ವಿಯಾಗಿ ಪೂರೈಸಿರುತ್ತಾರೆ.
- ಸಮಾಜ ಬಾಂಧವರ ಝಕಾತ್ ಮೊತ್ತವನ್ನು ಸಾಮೂಹಿಕವಾಗಿ ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರವಾದ ಮೊತ್ತವನ್ನು ಅರ್ಹರಾದ ಸಣ್ಣ ವ್ಯಾಪಾರಿಗಳಿಗೆ ನಗದು ರೂಪದಲ್ಲಿ, ಕೂಲಿಯವರಿಗೆ ಕೈಗಾಡಿಯನ್ನು, ಕೆಲವರಿಗೆ ಸೈಕಲನ್ನು ವಿತರಿಸಲಾಗಿದೆ.
- ಕುರ್ಬಾನಿ ಚರ್ಮ ಸಂಗ್ರಹ ಮೂಲಕ ಸಂಗ್ರಹವಾದ ಮೊತ್ತದಿಂದ ಮಹಿಳೆಯರಿಗೆ ಸ್ವ ಉದ್ಯೋಗಕ್ಕಾಗಿ ನೆರವು ನೀಡಲಾಗಿದೆ. ಹೊಲಿಗೆ ತರಬೇತಿ ಹೊಂದಿರುವ ಬಡ ಮಹಿಳೆಯರಿಗೆ ಕಳೆದ 23 ವರ್ಷಗಳಿಂದ ಪ್ರತಿ ವರ್ಷವೂ ಹೊಲಿಗೆಯಂತ್ರಗಳನ್ನು ವಿತರಿಸಲಾಗಿದೆ.
- ವಿಧವೆ, ಅಂಗವಿಕಲ ಯಾ ವೃದ್ಧರಾದ ಬಡ ಮುಸ್ಲಿಮರಿಗೆ ಮಾಸಿಕ ಪಿಂಚಣಿಯನ್ನು ಸಂಸ್ಥೆಯು ನೀಡುತ್ತದೆ. ಇಬ್ಬರು ಅಂಧರು ಮತ್ತು ವಿಧವೆ ಸೇರಿದಂತೆ ಒಟ್ಟು 8 ಮಂದಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ.
- ಪ್ರತಿ ವರ್ಷ ಶಾಲೆಗಳಿಗೆ ಬೇಸಿಗೆ ರಜೆಯ ಸಂದರ್ಭದಲ್ಲಿ ಉಡುಪಿ ತಾಲೂಕಿನ ಬಡ ಮುಸ್ಲಿಮ್ ಕುಟುಂಬಗಳ ಬಾಲಕರಿಗೆ ಉಚಿತ ಸುನ್ನತ್ ನಡೆಸುವ ಯೋಜನೆಯೂ ಜಾರಿಯಲ್ಲಿದೆ. ಆಯ್ದ ಬಡ ಮಕ್ಕಳ ಮನೆಗಳಿಗೇ ತೆರಳಿ ಸುನ್ನತ್ ನೆರವೇರಿಸಿ ಕೊಡಲಾಗುತ್ತದೆ. ಪ್ರತಿ ಬಾಲಕನಿಗೆ ಉಚಿತ ಸುನ್ನತ್ ಜೊತೆಗೆ ಸುನ್ನತ್ ವೇಳೆ ಉಡುವ ವಸ್ತ್ರ, ಔಷಧೋಪಚಾರ ಮತ್ತು ನಗದನ್ನು ನೀಡಲಾಗುವುದು. ಕಳೆದ ವರ್ಷ 63 ಮಕ್ಕಳಿಗೆ ಉಚಿತ ಸುನ್ನರ್ ನೆರವೇರಿಸಲಾಯಿತು.
- ಟೈಲರಿಂಗ್ ತರಬೇತಿ : ಸಮುದಾಯದ ಮಹಿಳೆಯರ ನೆರವಿಗಾಗಿ ಹೊಲಿಗೆ, ಎಂಬ್ರಾಡರಿ ಮತ್ತು ಫ್ಯಾಶನ್ ಡಿಸೈನಿಂಗ್ ಕಲಿಸುವ ತರಬೇತಿ ಕೇಂದ್ರವೊಂದನ್ನು ಜನವರಿ 2006ರಿಂದ ಸಂಸ್ಥೆಯ ಈಗಿನ ಕಚೇರಿಯಲ್ಲೇ ಸ್ಥಾಪಿಸಲಾಗಿದೆ. ಈ ಉಚಿತ ತರಬೇತಿ ಕೇಂದ್ರದಲ್ಲಿ ಸುಮಾರು 20 ಹೆಣ್ಣು ಮಕ್ಕಳು ಎರಡು ಪಾಳಿಗಳಲ್ಲಿ ಕಲಿಯುತ್ತಿದ್ದಾರೆ. ತರಬೇತಿಯನ್ನು ಸಂಸ್ಥೆ ನೇಮಿಸಿದ ನುರಿತ ಶಿಕ್ಷಕಿಯಿಂದ ನೀಡಲಾಗುತ್ತಿದೆ.
- ಇಫ್ತಾರ್ ಕೂಟ : ಕಳೆದ ಸುಮಾರು 15 ವರ್ಷಗಳಿಂದ ನಿರಂತರವಾಗಿ ಉಡುಪಿ ಜಾಮಿಯ ಮಸೀದಿಯಲ್ಲಿ ಇಫ್ತಾರ್ ವ್ಯವಸ್ಥೆಯನ್ನು ಸಂಸ್ಥೆಯು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಸಮಾಜ ಬಾಂಧವರ ದೇಣಿಗೆಗಳಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ. ದಿನಂಪ್ರತಿ 500 ರಿಂದ 600 ಜನ ಉಪವಾಸಿಗರು ಇದರಲ್ಲಿ ಪಾಲ್ಗೊಳ್ಳುತ್ತಾರೆ.
- ಸಂಸ್ಥೆಯು ಕೈಗೊಂಡ ಪ್ರಾಮುಖ್ಯ ಕಾರ್ಯಗಳು : ಇಸ್ಲಾಮೀ ಶಿಕ್ಷಣವನ್ನು ಪ್ರಚಾರ ಮಾಡುವ ಉದ್ದೇಶದಿಂದ ಉರ್ದು ಮತ್ತು ಕನ್ನಡದಲ್ಲಿ ಮುದ್ರಿಸಿದ ಪುಸ್ತಕಗಳನ್ನು ಉಚಿತ ವಿತರನೆಗಾಗಿ ಉಪಯೋಗಿಸಲಾಗಿದೆ. ಕುವೈಟನಲ್ಲಿರುವ ನಮ್ಮ ಸದಸ್ಯರ ನೆರವಿನಂದ ಈ ಯೋಜನೆಯನ್ನು ನೆರವೇರಿಸಲಾಗಿದೆ.
- ಗಲ್ಫ್ ದೇಶಗಳ ನಮ್ಮ ಸದಸ್ಯರು ಸಂಗ್ರಹಿಸಿ ಕಳುಹಿಸಿದಂತಹ ಹಳೆಯ ಬಟ್ಟೆಬರೆಗಳನ್ನು ಅಸ್ಸಾಂನ ನೆರೆಪೀಡಿತರಿಗಾಗಿ ಕಳುಹಿಸಿ ಕೊಡಲಾಗಿದೆ. ಬೇರೆ ಸಂದರ್ಭದಲ್ಲಿ ಬಂದ ಬಟ್ಟೆಗಳನ್ನು ಉಡುಪಿ ತಾಲೂಕಿನ ಹಿಂದುಳಿದ ಪ್ರದೇಶಗಳ ಬಡವರಿಗೆ ಹಂಚಲಾಗಿದೆ.
- 1980ರ ದಶಕದಲ್ಲಿ ಉಡುಪಿ ಕಲ್ಸಂಕ ಪರಿಸರದಲ್ಲಿ ನೆರೆಯುಂಟಾದ ಸಂದರ್ಭದಲ್ಲಿ ಮನೆಗಳನ್ನು ಕಳೆದುಕೊಂಡು ನಷ್ಟಕ್ಕೊಳಗಾದ 6 ಕುಟುಂಬಳಿಗೆ ಧನ ಸಹಾಯ ನೀಡಲಾಗಿತ್ತು.

- ಈದ್ ಮಿಲನ್ : ನಗರ ಸಭೆಯ ಸತ್ಯಮೂರ್ತಿ ಹಾಲ್‌ನಲ್ಲಿ ಈದ್ ಮಿಲನ್ ಕಾರ್ಯಕ್ರಮವನ್ನು ಸಂಸ್ಥೆಯ ವತಿಯಿಂದ ನಡೆಸಲಾಗಿದೆ. ಸತ್ಯಮೂರ್ತಿ ಸಭಾಂಗಣದಲ್ಲಿ 3 ಬಾರಿ ನಡೆದ ಈದ್ ಮಿಲನ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಗಣ್ಯರಲ್ಲಿ ಡಾ। ವಿ.ಎಸ್. ಆಚಾರ್ಯ, ಅಬ್ದುಸ್ಸಲಾಮ್ ಪುತ್ತಿಗೆ, ಪ್ರೊ.ಕೆ.ಎಸ್. ನಸಾರ್ ಅಹ್ಮದ್, ಶೋಕಮಾತ ಇಗರ್ಜಿಯ ಪ್ಯಾರಿಶ್ ಪ್ರೀಸ್ಟ್ ತಾಪ್ರೋ, ಆಸ್ಕರ್ ಫೆನಾಂಡಿಸ್ ಮತ್ತು ಸೋಮಶೇಖರ ಭಟ್ ಪ್ರಮುಖರು.
- ಇನ್ನೊಂದು ಈದ್ ಮಿಲನ್ ಕಾರ್ಯಕ್ರಮವು ಅಂದಿನ ಪರ್ಯಾಯ ಪೀಠಾಧೀಶರಾದ ಪೇಜಾವರ ಮಠದ ಶ್ರೀ ವಿಶ್ವೇಶ್ವರತೀರ್ಥ ಸ್ವಾಮೀಜಿಯವರ ಸಹಕಾರದಿಂದ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆದಿತ್ತು. ಸಾವಿರಾರು ಮಂದಿ ಸಾರ್ವಜನಕರು ಸೇರಿದ್ದು ಸಭೆಯ ಅಧ್ಯಕ್ಷತೆಯನ್ನು ಹುಬ್ಬಳ್ಳಿಯ ದಿ।ಡಾ. ಎಸ್ ಅಹ್ಮದ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಂದಿನ ಕರ್ನಾಟಕ ಸಚಿವರಾದ ಶ್ರೀ ಅಮರನಾಥ ಶೆಟ್ಟಿ, ಸನ್ಮಾರ್ಗ ವಾರಪತ್ರಿಕೆಯ ಸಂಪಾದಕ ಜನಾಬ್ ಇಬ್ರಾಹೀಂ ಸಈದ್ ಮತ್ತು ಸ್ವತಃ ಪೇಜಾವರ ಶ್ರೀಗಳೇ ಭಾಗವಹಿಸಿದ್ದರು. ಮರುದಿನ ಪತ್ರಿಕೆಗಳಲ್ಲಿ ಈ ಕಾರ್ಯಕ್ರಮದ ವ್ಯಾಪಕ ವರದಿ ಪ್ರಕಟವಾಗಿತ್ತು.
- ರಕ್ತದಾನ ಶಿಬಿರ : ಮಣಿಪಾಲ ಬ್ಲಡ್ ಬ್ಯಾಂಕ್‌ನ ನೆರವಿನಿಂದ ಉಡುಪಿ ಬ್ರಹ್ಮಗಿರಿಯ ಲಯನ್ಸ್ ಭವನದಲ್ಲಿ ಸಂಸ್ಥೆಯ ವತಿಯಿಂದ ಕೈಗೊಳ್ಳಲಾದ ರಕ್ತದಾನ ಕಾರ್ಯಕ್ರಮವು ತುಂಬಾ ಯಶಸ್ವಿಯಾಗಿತ್ತು ಸಮುದಾಯದ ಮಹಿಳೆಯರೂ ಸೇರಿದಮತೆ ಸುಮಾರು 100 ಮಂದಿ ರಕ್ತದಾನ ನೀಡಿದ್ದರು. ಮುಂದಿನ ದಿನಗಳಲ್ಲಿ ರಕ್ತದ ಅವಶ್ಯಕತೆಯಿದ್ದ ರೋಗಿಗಳು ಇದರ ಪ್ರಯೋಜನ ಪಡೆದರು.
- ಬಡ ಹುಡುಗಿಯ ವಿವಾಹ : ತೀರಾ ಬಡ ಕುಟುಂಬದ ಹುಡುಗಿಯೋರ್ವಳ ಸರಳ ವಿವಾಹವನ್ನು ಉಡುಪಿ ಜಾಮಿಯಾ ಮಸೀದಿಯಲ್ಲಿ ಸಂಸ್ಥೆಯು ನೆರವೇರಿಸಿದೆ. ವಧು ವರನಿಗೆ ಚಿನ್ನ ಬಟ್ಟೆಬರೆ ನೀಡುವ ಜೊತೆ ಎರಡೂ ಕಡೆಯ ತಲಾ 50 ಮಂದಿಗೆ ಊಟದ ವ್ಯಸ್ಥೆಯನ್ನು ಮಾಡಲಾಗಿತ್ತು.
- ರೋಗಿಗಳಿಗೆ ಸಹಾಯ : ತೀರಾ ಬಡರೋಗಿಗಳಿಗೆ ಸೀಮಿತ ಸಂಖ್ಯೆಯಲ್ಲಿ ಪ್ರತಿ ವರ್ಷವೂ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಅಲ್ಲದೆ ಬಾವಿತೋಡಲು, ಮನೆ ರಿಪೇರಿಗೆ ಸಹಾಯ ಕೋರಿಬಂದ ಅರ್ಜಿಗಳ ಅನ್ವೇಷಣೆ ನಡೆಸಿ ಅರ್ಹರಿಗೆ ಸಹಾಯ ಮಾಡಲಾಗಿದೆ.
- ದಫನ ಕಾರ್ಯಕ್ಕೆ ಸಹಕಾರ : ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ಯಾ ಮಣಿಪಾಲ ಆಸ್ಪತ್ರೆಯಲ್ಲಿ ಮರನ ಹೊಂದಿದ ರೋಗಿಗಳ ಮೃತದೇಹಗಳನ್ನು ಕೊಂಡು ಹೋಗಲು ಯಾರೂ ಮುಂದೆ ಬಾರದ ಸಂದರ್ಭಗಳಲ್ಲಿ ಅವುಗಳ ದಫನ ಕೆಲಸಗಳನ್ನು ಸಂಸ್ಥೆಯ ವತಿಯಿಂದ ಮಾಡಲಾಗಿದೆ. ಅಲ್ಲದೆ ಬಡ ಕುಟುಂಬಗಳಿಗೂ ದಫನ ಸಂದರ್ಭದಲ್ಲಿ ಧನ ಸಹಾಯದ ವ್ಯವಸ್ಥೆ ಮಾಡಲಾಗಿದೆ.

ಮುಂದಿನ ಯೋಜನೆಗಳು :

- ಈಗಾಗಲೇ ಕಾರ್ಯಾಚರಿಸುತ್ತಿರುವ ಟೈಲರಿಂಗ್ ಮತ್ತು ಎಂಬ್ರಾಯ್ಡರಿ ತರಗಳಿಗಳನ್ನು ಅತ್ಯಾಧುನಕಗೊಳಿಸಿ ಸಮುದಾಯದ ಮಹಿಳೆಯರಿಗೆ ಸಮರ್ಪಕ ತರಬೇತಿ ನೀಡಿ ಅವರೂ ಆರ್ಥಿಕವಾಗಿ ಸುದೃಢರಾಗುವಂತೆ ಸಹಕರಿಸುವುದು.
- ಆರ್ಥಿಕ ಅಡಚನೆಯಿಂದಾಗಿ ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸರ್ವೇಮಾಡಿ ಅವರ ವಿದ್ಯೆಯನ್ನು ಮುಂದುವರಿಸಲು ಸಹಕರಿಸುವುದು.
- ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರ ಉಚ್ಛ ಶಿಕ್ಷಣದ ಸಂಪೂರ್ಣ ವೆಚ್ಚವನ್ನು ಸಂಸ್ಥೆಯು ದಾನಿಗಳ ನೆರವಿನಿಂದ ವಹಿಸಿಕೊಳ್ಳುವುದು.
- ಪಬ್ಲಿಕ್ ಪರೀಕ್ಷೆಗಳಿಗೆ ಮುಂಚಿತವಾಗಿ ವಿದ್ಯಾರ್ಥಿಗಳಿಗೆ ಕೋಚಿಂಗ್ ಕ್ಲಾಸ್‌ಗಳ ವ್ಯವಸ್ಥೆ ಮಾಡುವುದು.
- ಧಾರ್ಮಿಕ ತರಬೇತಿಯ ಶಿಬಿರಗಳನ್ನು ನಡೆಸುವುದು.
- ಅಲ್ಪ ಸಂಖ್ಯಾತರಿಗೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ಮಾಹಿತಿ ಮತ್ತು ಸಹಕಾರ ನೀಡುವುದು.
- ವಿದ್ಯಾರ್ಥಿಗಳಿಗೆ ವೃತಿ ಆಧಾರಿತ (ಎಠಿಥ ಔಡಿಬಿಜಟಿಣಜಜ) ಕೋರ್ಸ್‌ಗಳನ್ನು ಕಲಿಯಲು ಪ್ರೋತ್ಸಾಹಿಸುವುದು ಮತ್ತು ವೃತ್ತಿ ಮಾರ್ಗದರ್ಶನ ಶಿಬಿರಗಳನ್ನು ನಡೆಸುವುದು.
- ಧಾರ್ಮಿಕ ಶಿಕ್ಷಣದಿಂದ ವಂಚಿರರಾದ ಯುವಕರಿಗೆ ನುರಿತ ಶಿಕ್ಷಕರಿಂದ ಅರಬೀ ಮತ್ತು ಉರ್ದು ಭಾಷೆಗಳನ್ನು ಕಲಿಸುವ ಏರ್ಪಾಟು ಮಾಡುವುದು.

ಇಂದು ಉಡುಪಿ ಆಸುಪಾಸಿನ ಪ್ರದೇಶಗಳಲ್ಲಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ. ಈ ಸಮಸ್ಯೆಯ ನಿವಾರಣೆಗಾಗಿ ಇಂಗ್ಲೀಷ್ ಮಾಧ್ಯಮ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣವನ್ನು ನೀಡುವ ಶಾಲೆಯೊಂದನ್ನು ಸ್ಥಾಪಿಸಬೇಕೆಂಬ ಬಲವಾದ ಅಪೇಕ್ಷೆ ನಮ್ಮದಾಗಿದೆ. ಪ್ರಥಮ ವರ್ಷದಲ್ಲಿ ಐ.ಐ.ಉ. ತರಗತಿಯನ್ನು ಆರಂಭಿಸಿ ಮುಂದಿನ ಪ್ರತೀ ವರ್ಷಗಳಲ್ಲಿ ಒಂದೊಂದೇ ತರಗತಿ ಹೆಚ್ಚಿಸುತ್ತಾ ಒಂದು ಸುದೃಢ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಬಹುದಾಗಿದೆ.
ನಮ್ಮ ಸಮಾಜದ ಹೆಣ್ಣು ಮಕ್ಕಳಿಗೆ ಪದವಿ ಶಿಕ್ಷಣದ ಜೊತೆಗೆ ಧಾರ್ಮಿಕ ಮತ್ತು ವೃತ್ತಿ ಶಿಕ್ಷಣದ ಅಗತ್ಯವಿದೆ, ಇವರು ಮುಂದೆ ವೈದ್ಯರಾಗಿ, ಇಂಜಿನಿಯರಾಗಿ, ವಕೀಲರಾಗಿ, ಶಿಕ್ಷಕಿಯಾಗಿ ಮುಖ್ಯ ವಾಹಿನಿಯಲ್ಲಿ ಮುನ್ನುಗ್ಗಬೇಕಾಗಿದೆ. ಇದಕ್ಕೆ ಬೇಕಾದ ಸಹಕಾರ ಮತ್ತು ಸವಲತ್ತು ನೀಡುವ ನಿಟ್ಟಿನಲ್ಲಿ ಸಂಸ್ಥೆಯನ್ನು ಅಲ್ಲಾಹನು ಅನುಗ್ರಹಿಸಲಿ.

ಮೇಲಿನ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಸಂಸ್ಥೆಗೆ ಒಂದು ವಿಶಾಲವಾದ ಕಾರ್ಯಾಲಯದ ಅಗತ್ಯವಿದೆ. ಉಡುಪಿಯ ಪೇಟೆಯಲ್ಲಿಯೇ ಇಂತಹ ಒಂದು ಸ್ಥಳಾವಕಾಶವಿರುವ ಕಾರ್ಯಾಲಯವನ್ನು ಖರೀದಿಸಬೇಕೆಂಬ ಮಹದಾದೆ ಸಂಸ್ಥೆಗೆ ಇದೆ. ಇದು ಸಮುದಾಯದ ಉದಾರದಾನಗಳ ನೆರವಿನಿಂದ ಮಾತ್ರ ಸಾಧ್ಯ.
ಸರ್ವಶಕ್ತನಾದ ಅಲ್ಲಾಹನು ಸಂಸ್ಥೆಯ ಎಲ್ಲಾ ಅಪೇಕ್ಷಣೀಯ ಆಶೋತ್ತರಗಳನ್ನು ಈಡೇರಿಸಲಿ ಮತ್ತು ಸಮುದಾಯದ ಸಹೃದಯೀ ಬಾಂಧವರಿಂದ ಸರ್ವರೀತಿಯ ನೆರವು ಹರಿದು ಬರುವಂತೆ ಅಲ್ಲಾಹನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ. ವ ಆಖಿರ್ ದಾವಾನ ಅನಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

ವಿ.ಎಸ್. ಉಮರ್
ಗೌರವ ಪ್ರಧಾನ ಕಾರ್ಯದರ್ಶಿ
ಮುಸ್ಲಿಂ ವೆಲ್‌ಫೇರ್ ಎಸೋಸಿಯೇಶನ್ (ರಿ)
ಉಡುಪಿ